# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **453** |
| ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ (ಪಿಎಂಎಫ್ಎಂಇ) ಯೋಜನೆಯ ಉದ್ದೇಶವೇನು; ಫಲಾನುಭವಿಗಳಿಗೆ ಶೇಕಡ ಎಷ್ಟು ಸಹಾಯಧನ ದೊರೆಯಲಿದೆ; ಇದರಲ್ಲಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾಲು ಎಷ್ಟು; | ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ (PMFME) ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿವೆ :<br>• ಒಂದು ಕೋಟಿಗಿಂತ ಕಡಿಮೆ ಬಂಡವಾಳ ಹೂಡಿಕೆ ಮತ್ತು ಐದು ಕೋಟಿಗಿಂತ ಕಡಿಮೆ ವಹಿವಾಟು ನಡೆಸುವ ಅತೀ ಸಣ್ಣ ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು ಸಂಸ್ಕರಣಾ ಉದ್ಯಮಿಗಳು, ಎಫ್‌ಪಿಒಗಳು, ಸ್ವಸಹಾಯ ಗುಂಪುಗಳು, ಸಹಕಾರಿಗಳು, ಖಾಸಗಿ ಕಂಪನಿಗಳಿಗೆ ಘಟಕ ಸ್ಥಾಪಿಸಲು ಸಾಲ ಸೌಲಭ್ಯಗಳನ್ನು ಹೆಚ್ಚಿಸುವುದು.<br>• ರೈತರ ಗುಂಪುಗಳು, ರೈತ ಉತ್ಪಾದಕ ಸಂಸ್ಥೆಗಳು / ರೈತ ಉತ್ಪಾದಕ ಕಂಪನಿಗಳು, ಸಹಕಾರಿಗಳು ಈ ಮುಂತಾದವರ ಬ್ರಾಂಡಿಂಗ್ ಹಾಗೂ ಮಾರ್ಕೆಟಿಂಗ್ ಅನ್ನು ಬಲಪಡಿಸುವುದು, ಉದ್ದಿಮೆಗಳಿಗೆ ವೃತ್ತಿಪರ ಹಾಗೂ ತಾಂತ್ರಿಕ ಬೆಂಬಲ ದೊರೆಯುವಿಕೆಯನ್ನು ಹೆಚ್ಚಿಸುವುದು.<br>• ರೈತರ ಗುಂಪುಗಳು, ರೈತ ಉತ್ಪಾದಕ ಸಂಸ್ಥೆಗಳು / ರೈತ ಉತ್ಪಾದಕ ಕಂಪನಿಗಳು, ಸಹಕಾರಿಗಳು ಈ ಮುಂತಾದವರಿಗೆ ಸಾಮಾನ್ಯ ಸಂಸ್ಕರಣಾ ಸೌಲಭ್ಯ, ಪ್ರಯೋಗಾಲಯಗಳು, ದಾಸ್ತಾನು ಶೇಖರಣೆ, ಪ್ಯಾಕೇಜಿಂಗ್, ಮಾರ್ಕೆಟಿಂಗ್ ಹಾಗೂ ಇನ್‌ಕ್ಯೂಬೇಷನ್ ಸೇವೆಗಳಂತಹ ಸಾಮಾನ್ಯ ಸೇವೆಗಳ ದೊರೆಯುವಿಕೆಯನ್ನು ಹೆಚ್ಚಿಸುವುದು.<br>ಯೋಜನೆಯಡಿ ಫಲಾನುಭವಿಗಳಿಗೆ ಯೋಜನಾ ವೆಚ್ಚದ ಶೇ.35 ರಷ್ಟು ಸಾಲ ಸಂಪರ್ಕಿತ ಸಹಾಯಧನವನ್ನು ನೀಡಲಾಗುತ್ತಿದ್ದು, ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40 ರ ಅನುಪಾತದಲ್ಲಿ ಇರುತ್ತದೆ. ಸಹಾಯಧನದ ಗರಿಷ್ಠ ಮಿತಿ ರೂ.10.00 ಲಕ್ಷ (ಕೇಂದ್ರ ರೂ.6.00 ಲಕ್ಷ, ರಾಜ್ಯ |

| | | |
|---|---|---|
| | | ರೂ.4.00 ಲಕ್ಷ). ಇದಲ್ಲದೆ, ಯೋಜನೆಯನ್ನು ಮತ್ತಷ್ಟು ಆಕರ್ಷಕಗೊಳಿಸಲು ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ಶೇ.15 ರಷ್ಟು ಸಹಾಯಧನ - ಗರಿಷ್ಠ ರೂ.5.00 ಲಕ್ಷವನ್ನು ಫಲಾನುಭವಿಗಳಿಗೆ ಕಿರು ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು ನೀಡುತ್ತಿದೆ. ಒಟ್ಟಾರೆ, ಕಿರು ಆಹಾರ ಸಂಸ್ಕರಣಾ ಉದ್ದಿಮೆ ಸ್ಥಾಪಿಸಲು ಶೇ.50 ರಷ್ಟು – ಗರಿಷ್ಠ ರೂ.15.00 ಲಕ್ಷ ಸಹಾಯಧನ ಒದಗಿಸಲಾಗುತ್ತಿದೆ. |
| (ಆ) | ಈ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು; | ಯೋಜನೆಯಡಿ ಫಲಾನುಭವಿಗಳ ಆಯ್ಕೆ ಮಾನದಂಡಗಳು ಈ ಕೆಳಕಂಡತಿವೆ.<br>• ಆಹಾರ ಸಂಸ್ಕರಣಾ ಘಟಕ ಸ್ಥಾಪಿಸಲು ಆಸಕ್ತಿವುಳ್ಳವರು 18 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.<br>• ಯಾವುದೇ ಕನಿಷ್ಠ ವಿದ್ಯಾರ್ಹತೆ ಅಗತ್ಯವಿಲ್ಲ.<br>• ಅರ್ಜಿದಾರರು ಉದ್ಯಮದ ಮಾಲೀಕತ್ವದ ಹಕ್ಕನ್ನು / ಪಾಲುದಾರಿಕೆಯನ್ನು ಹೊಂದಿರಬೇಕು.<br>• ಮೂಲಭೂತ ದಾಖಲೆಗಳಾದ ಆಧಾರ್ ಕಾರ್ಡ್, ವಿದ್ಯುತ್ ಬಿಲ್ ಈ ಮುಂತಾದ ವಿಳಾಸ ಮತ್ತು ಅಭ್ಯರ್ಥಿಗಳನ್ನು ಗುರುತಿಸುವ ದಾಖಲಾತಿಗಳನ್ನು ಹೊಂದಿರಬೇಕು.<br>• ಸಂಸ್ಕರಣಾ ಘಟಕ ಸ್ಥಾಪಿಸಲು ಯಂತ್ರೋಪಕರಣಗಳ ಅಂದಾಜು ಪಟ್ಟಿ ಒದಗಿಸಬೇಕು.<br>• ಕಡ್ಡಾಯವಾಗಿ ಬ್ಯಾಂಕ್ ಸಾಲ ಪಡೆದು ಘಟಕ ಸ್ಥಾಪಿಸಬೇಕಾಗಿರುತ್ತದೆ.<br>• ಇತರೇ ಸರ್ಕಾರದ ಯೋಜನೆಗಳಲ್ಲಿ ಬ್ಯಾಂಕ್ ಸಾಲ ಪಡೆದಿದ್ದರೂ ಸಹ ಅರ್ಹರಿರುತ್ತಾರೆ. |
| (ಇ) | ಸದರಿ ಯೋಜನೆಯಡಿ 2020-21 ರಿಂದ 2024-25 ನೇ ಸಾಲಿನವರೆಗೆ ಎಷ್ಟು ಮಂದಿ ಫಲಾನುಭವಿಗಳು ಆಯ್ಕೆಯಾಗಿದ್ದಾರೆ; ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿರುವ ಹಾಗೂ ಬಿಡುಗಡೆ ಮಾಡಲು ಬಾಕಿ ಇರುವ ಸಹಾಯಧನ ಮೊತ್ತ ಎಷ್ಟು ; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು) | PMFME ಯೋಜನೆಯಡಿ 2020-21 ರಿಂದ 2024-25 ರವರೆಗೆ 4423 ಫಲಾನುಭವಿಗಳು ಆಯ್ಕೆಗೊಂಡಿರುತ್ತಾರೆ. ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆಯನ್ನು **ಅನುಬಂಧ-1** ರಲ್ಲಿ, ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಸಹಾಯಧನದ ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ಹಾಗೂ ಬಾಕಿ ಸಹಾಯಧನ ಪಾವತಿಸಬೇಕಾಗಿರುವ ಫಲಾನುಭವಿಗಳ ಸಂಖ್ಯೆ ಮತ್ತು ಮೊತ್ತದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |

| | | |
|---|---|---|
| (ಈ) | ರಾಜ್ಯ ಸರ್ಕಾರ ಸಹಾಯಧನ ಬಿಡುಗಡೆ ಮಾಡದಿರುವುದರಿಂದ ಫಲಾನುಭವಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಉ) | ಬಂದಿದ್ದಲ್ಲಿ, ಸಹಾಯಧನದ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; ಸಹಾಯಧನ ಬಿಡುಗಡೆ ಮಾಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | PMFME ಯೋಜನೆಯ ಮಹತ್ವವನ್ನು ಮನಗಂಡು ರಾಜ್ಯ ಸರ್ಕಾರವು 2024-25 ನೇ ಸಾಲಿನ ಆಯವ್ಯಯದಲ್ಲಿ ರೂ.80.00 ಕೋಟಿ ಅನುದಾನವನ್ನು ನಿಗದಿಪಡಿಸಿರುತ್ತದೆ. ಈಗಾಗಲೇ 2024-25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಕೇಂದ್ರದ ಪಾಲಿನ ರೂ.37.50 ಕೋಟಿ ಅನುದಾನವು ಬಿಡುಗಡೆಯಾಗಿದ್ದು, ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರದ ಪಾಲು ರೂ.25.00 ಕೋಟಿ ಸೇರಿದಂತೆ ಒಟ್ಟು ರೂ.62.50 ಕೋಟಿ ಅನುದಾನವನ್ನು ಕೃಷಿ ಆಯುಕ್ತರ ಮೂಲಕ ಪಿಎಂಎಫ್ಎಂಇ ಯೋಜನೆಯ ರಾಜ್ಯ ನೋಡಲ್ ಏಜೆನ್ಸಿಯಾದ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಕೆಪೆಕ್ ಸಂಸ್ಥೆಯಿಂದ ಅರ್ಹ ಫಲಾನುಭವಿಗಳ ಬ್ಯಾಂಕ್ (Mirror Account) ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ. |

*ಕೃಇ 72 ಎಎಂಎಸ್ 2024*

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

**ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 453 ಕ್ಕೆ ಅನುಬಂಧ-1**
**PMFME ಯೋಜನೆಯಡಿ ವರ್ಷವಾರು ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ**

| ಕ್ರ.ಸಂ. | ಜಿಲ್ಲೆ | 2021-22 | 2022-23 | 2023-24 | 2024-25 (ಜೂನ್ ಅಂತ್ಯಕ್ಕೆ ) | ಒಟ್ಟು |
|---|---|---|---|---|---|---|
| 1 | ಬೆಳಗಾವಿ | 3 | 378 | 201 | 38 | 620 |
| 2 | ಬೆಂಗಳೂರು(ನ) | 20 | 81 | 136 | 33 | 270 |
| 3 | ಶಿವಮೊಗ್ಗ | 16 | 100 | 112 | 23 | 251 |
| 4 | ಧಾರವಾಡ | 7 | 87 | 121 | 26 | 241 |
| 5 | ಬಾಗಲಕೋಟೆ | 5 | 116 | 83 | 18 | 222 |
| 6 | ವಿಜಯಪುರ | 34 | 61 | 109 | 17 | 221 |
| 7 | ಹಾವೇರಿ | 8 | 61 | 106 | 28 | 203 |
| 8 | ಉಡುಪಿ | 12 | 63 | 97 | 29 | 201 |
| 9 | ತುಮಕೂರು | 11 | 74 | 98 | 14 | 197 |
| 10 | ದಕ್ಷಿಣಕನ್ನಡ | 7 | 86 | 90 | 13 | 196 |
| 11 | ಹಾಸನ | 21 | 77 | 90 | 6 | 194 |
| 12 | ಮಂಡ್ಯ | 26 | 90 | 63 | 7 | 186 |
| 13 | ಬೀದರ್ | 18 | 74 | 45 | 10 | 147 |
| 14 | ಉತ್ತರಕನ್ನಡ | 7 | 49 | 68 | 4 | 128 |
| 15 | ದಾವಣಗೆರೆ | 17 | 32 | 62 | 9 | 120 |
| 16 | ಕೊಪ್ಪಳ | 0 | 24 | 70 | 6 | 100 |
| 17 | ಗದಗ | 1 | 21 | 59 | 13 | 94 |
| 18 | ಕಲಬುರಗಿ | 1 | 32 | 44 | 10 | 87 |
| 19 | ರಾಯಚೂರು | 2 | 34 | 39 | 7 | 82 |
| 20 | ಚಿತ್ರದುರ್ಗ | 2 | 18 | 55 | 7 | 82 |
| 21 | ಚಿಕ್ಕಮಗಳೂರು | 2 | 33 | 32 | 7 | 74 |
| 22 | ಬೆಂಗಳೂರು(ಗ್ರಾ) | 13 | 29 | 22 | 4 | 68 |
| 23 | ವಿಜಯನಗರ | 0 | 28 | 29 | 7 | 64 |
| 24 | ರಾಮನಗರ | 6 | 25 | 27 | 3 | 61 |
| 25 | ಮೈಸೂರು | 2 | 20 | 33 | 5 | 60 |
| 26 | ಕೊಡಗು | 6 | 22 | 24 | 3 | 55 |
| 27 | ಕೋಲಾರ | 3 | 37 | 11 | 1 | 52 |
| 28 | ಯಾದಗಿರಿ | 2 | 22 | 21 | 4 | 49 |
| 29 | ಬಳ್ಳಾರಿ | 4 | 16 | 29 | 0 | 49 |
| 30 | ಚಿಕ್ಕಬಳ್ಳಾಪುರ | 3 | 18 | 13 | 1 | 35 |
| 31 | ಚಾಮರಾಜನಗರ | 0 | 7 | 5 | 2 | 14 |
| | **Grand Total** | **259** | **1815** | **1994** | **355** | **4423** |

ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 453 ಕ್ಕೆ ಅನುಬಂಧ-2

**ವರ್ಷವಾರು PMFME ಫಲಾನುಭವಿಗಳಿಗೆ ಬಿಡುಗಡೆ ಮಾಡಿರುವ ಸಹಾಯಧನದ ಮೊತ್ತ** (ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆ | district | 2021-22 | | 2022-23 | | 2023-24 | | ಒಟ್ಟು | |
|---|---|---|---|---|---|---|---|---|---|---|
| | | | ಬಿಡುಗಡೆ ಮಾಡಿದ ಸಹಾಯಧನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಮಾಡಿದ ಸಹಾಯಧನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಮಾಡಿದ ಸಹಾಯಧನ | ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಮಾಡಿದ ಸಹಾಯಧನ | ಫಲಾನುಭವಿಗಳ ಸಂಖ್ಯೆ |
| 1 | ಬಾಗಲಕೋಟೆ | Bagalkote | - | 0 | 230.24 | 68 | 160.72 | 57 | 390.97 | 125 |
| 2 | ಬಳ್ಳಾರಿ | Ballari | 5.78 | 3 | 33.1 | 13 | 23.65 | 10 | 62.53 | 26 |
| 3 | ಬೆಳಗಾವಿ | Belagavi | 10.00 | 1 | 602.55 | 255 | 348.52 | 140 | 961.07 | 396 |
| 4 | ಬೆಂಗಳೂರು(ಗ್ರಾ) | Bengaluru Rural | 10.00 | 1 | 125.36 | 27 | 70.05 | 13 | 205.41 | 41 |
| 5 | ಬೆಂಗಳೂರು(ನ) | Bengaluru Urban | 67.38 | 12 | 267.23 | 47 | 304.77 | 58 | 639.39 | 117 |
| 6 | ಬೀದರ್ | Bidar | 9.99 | 2 | 339.36 | 52 | 171.58 | 26 | 520.92 | 80 |
| 7 | ಚಾಮರಾಜನಗರ | Chamarajanagara | - | 0 | 12.73 | 3 | 13.63 | 3 | 26.35 | 6 |
| 8 | ಚಿಕ್ಕಬಳ್ಳಾಪುರ | Chikkaballapura | 2.63 | 1 | 35.92 | 11 | 44.63 | 14 | 83.17 | 26 |
| 9 | ಚಿಕ್ಕಮಗಳೂರು | Chikkamagaluru | - | 0 | 129.62 | 32 | 40.36 | 7 | 169.97 | 39 |
| 10 | ಚಿತ್ರದುರ್ಗ | Chitradurga | - | 0 | 47.96 | 13 | 49.71 | 16 | 97.67 | 29 |
| 11 | ದಕ್ಷಿಣಕನ್ನಡ | Dakshina Kannada | 1.93 | 1 | 243.99 | 59 | 172.43 | 37 | 418.34 | 97 |
| 12 | ದಾವಣಗೆರೆ | Davangere | 13.15 | 6 | 97.48 | 32 | 88.76 | 23 | 199.39 | 61 |
| 13 | ಧಾರವಾಡ | Dharwad | 1.82 | 1 | 145.33 | 61 | 109.26 | 46 | 256.40 | 108 |
| 14 | ಗದಗ | Gadag | 3.50 | 1 | 18.75 | 8 | 23.67 | 18 | 45.91 | 27 |
| 15 | ಹಾಸನ | Hassan | 27.74 | 5 | 195.77 | 64 | 130.29 | 38 | 353.80 | 107 |
| 16 | ಹಾವೇರಿ | Haveri | 18.69 | 3 | 107.52 | 45 | 72.41 | 23 | 198.62 | 71 |
| 17 | ಕಲಬುರಗಿ | Kalaburagi | - | 0 | 56.34 | 19 | 64.76 | 19 | 121.11 | 38 |
| 18 | ಕೊಡಗು | Kodagu | 40.00 | 4 | 77.42 | 16 | 63.63 | 10 | 181.05 | 30 |
| 19 | ಕೋಲಾರ | Kolar | 18.94 | 2 | 104.54 | 22 | 71.98 | 17 | 195.45 | 41 |
| 20 | ಕೊಪ್ಪಳ | Koppal | - | 0 | 18.46 | 11 | 83.35 | 32 | 101.81 | 43 |
| 21 | ಮಂಡ್ಯ | Mandya | 77.86 | 8 | 815.69 | 87 | 268.47 | 32 | 1,162.02 | 127 |
| 22 | ಮೈಸೂರು | Mysuru | 10.00 | 1 | 47.12 | 11 | 58.88 | 14 | 116.00 | 26 |
| 23 | ರಾಯಚೂರು | Raichur | - | 0 | 69.23 | 19 | 36.9 | 16 | 106.13 | 35 |
| 24 | ರಾಮನಗರ | Ramanagara | 8.55 | 3 | 75.04 | 19 | 36.16 | 13 | 119.75 | 35 |
| 25 | ಶಿವಮೊಗ್ಗ | Shivamogga | 11.39 | 4 | 233.42 | 85 | 124.3 | 45 | 369.11 | 134 |
| 26 | ತುಮಕೂರು | Tumakuru | 21.22 | 5 | 161.75 | 41 | 124.03 | 46 | 306.99 | 92 |
| 27 | ಉಡುಪಿ | Udupi | 35.74 | 5 | 159.77 | 38 | 141.66 | 38 | 337.17 | 81 |
| 28 | ಉತ್ತರಕನ್ನಡ | Uttara Kannada | 12.92 | 4 | 168.26 | 35 | 109.81 | 24 | 290.99 | 63 |
| 29 | ವಿಜಯನಗರ | Vijayanagara | - | 0 | 39.11 | 14 | 40.97 | 21 | 80.08 | 35 |
| 30 | ವಿಜಯಪುರ | Vijayapura | 9.10 | 1 | 66.46 | 48 | 138.36 | 45 | 213.92 | 94 |
| 31 | ಯಾದಗಿರಿ | Yadgir | - | 0 | 85.66 | 19 | 28.71 | 12 | 114.38 | 31 |
| ಒಟ್ಟು | | | **418.33** | **74** | **4,811.18** | **1274** | **3,216.41** | **913** | **8,445.87** | **2261** |

ಷರಾ : ಯೋಜನೆಯ ಮೊದಲನೇ ವರ್ಷ 2020-21 ನೇ ಸಾಲಿನಲ್ಲಿ ಪೂರ್ವಭಾವಿ ಚಟುವಟಿಕೆಗಳನ್ನು ಮತ್ತು ಪ್ರಚಾರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾತ್ರ ಕೈಗೊಳ್ಳಲಾಗಿರುತ್ತದೆ.

ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 453 ಕ್ಕೆ ಅನುಬಂಧ-3

ಸಹಾಯಧನ ಬಾಕಿ ಪಾವತಿಸಬೇಕಾಗಿರುವ ಫಲಾನುಭವಿಗಳ ಸಂಖ್ಯೆ ಮತ್ತು ಮೊತ್ತ (2024 ರ ಜೂನ್ ಅಂತ್ಯಕ್ಕೆ)

| ಕ್ರ.ಸಂ. | ಜಿಲ್ಲೆ | ಸಹಾಯಧನ ಪಾವತಿಸಬೇಕಾಗಿರುವ ಫಲಾನುಭವಿಗಳ ಸಂಖ್ಯೆ | ಸಹಾಯಧನದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 97 | 253.5 |
| 2 | ಬಳ್ಳಾರಿ | 23 | 59.64 |
| 3 | ಬೆಳಗಾವಿ | 223 | 592.95 |
| 4 | ಬೆಂಗಳೂರು(ಗ್ರಾ) | 27 | 118.73 |
| 5 | ಬೆಂಗಳೂರು(ನ) | 153 | 785.38 |
| 6 | ಬೀದರ್ | 67 | 422.88 |
| 7 | ಚಾಮರಾಜನಗರ | 8 | 30.91 |
| 8 | ಚಿಕ್ಕಬಳ್ಳಾಪುರ | 9 | 40.58 |
| 9 | ಚಿಕ್ಕಮಗಳೂರು | 35 | 119.21 |
| 10 | ಚಿತ್ರದುರ್ಗ | 53 | 157.66 |
| 11 | ದಕ್ಷಿಣಕನ್ನಡ | 99 | 495.84 |
| 12 | ದಾವಣಗೆರೆ | 59 | 172.69 |
| 13 | ಧಾರವಾಡ | 133 | 285.71 |
| 14 | ಗದಗ | 67 | 108.34 |
| 15 | ಹಾಸನ | 87 | 286.94 |
| 16 | ಹಾವೇರಿ | 132 | 362.01 |
| 17 | ಕಲಬುರಗಿ | 49 | 159.5 |
| 18 | ಕೊಡಗು | 25 | 146.89 |
| 19 | ಕೋಲಾರ | 11 | 55.2 |
| 20 | ಕೊಪ್ಪಳ | 57 | 110.83 |
| 21 | ಮಂಡ್ಯ | 59 | 470.62 |
| 22 | ಮೈಸೂರು | 34 | 192.77 |
| 23 | ರಾಯಚೂರು | 47 | 97.58 |
| 24 | ರಾಮನಗರ | 26 | 103.01 |
| 25 | ಶಿವಮೊಗ್ಗ | 117 | 368.66 |
| 26 | ತುಮಕೂರು | 106 | 316.42 |
| 27 | ಉಡುಪಿ | 120 | 419.18 |
| 28 | ಉತ್ತರಕನ್ನಡ | 65 | 203.01 |
| 29 | ವಿಜಯನಗರ | 29 | 88.21 |
| 30 | ವಿಜಯಪುರ | 126 | 373.53 |
| 31 | ಯಾದಗಿರಿ | 19 | 37.73 |
| ಒಟ್ಟು | | **2162** | **7436.11** |